**All India Radio: Bangalore**
**National Bulletin In Kannada**
**10.07.2025 1.10 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**10.07.2025 1.10 p.m.**
**<><><><>**

ಮುಖ್ಯಾಂಶಗಳು

1. ಗೌರವಯುತ ರೀತಿಯಲ್ಲಿ ಸಾಲ ವಸೂಲಾತಿಗೆ ಬ್ಯಾಂಕೇತರ ಹಣಕಾಸು ಸಂಸ್ಥೆಗಳಿಗೆ ಕೇಂದ್ರ ಹಣಕಾಸು ಸಚಿವೆ ಸಲಹೆ
2. ಗ್ರಾಮೀಣ ಡಾಕ್ ಸೇವಕರೊಂದಿಗೆ ಕೇಂದ್ರ ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಸಂವಾದ
3. ಗುಜರಾತಿನ ವಡೋದರದಲ್ಲಿ ಸೇತುವೆ ಕುಸಿತ ; ಮೃತಪಟ್ಟವರ ಸಂಖ್ಯೆ ೧೨ಕ್ಕೆ ಏರಿಕೆ
4. ಟೆಸ್ಟ್ ಕ್ರಿಕೆಟ್ : ಮೂರನೇ ಪಂದ್ಯದಲ್ಲಿಂದು ಭಾರತ - ಇಂಗ್ಲೆಂಡ್ ಮುಖಾಮುಖಿ

<><><><>

ಬ್ಯಾಂಕೇತರ ಹಣಕಾಸು ಕಂಪನಿಗಳ ಸಾಲ ವಸೂಲಾತಿ ಪದ್ಧತಿಗಳು ನ್ಯಾಯಯುತ, ಸಹಾನುಭೂತಿ ಮತ್ತು ಗೌರವಯುತ ರೀತಿಯಲ್ಲಿ ನಡೆಯಬೇಕು ಹಾಗೂ ಆರ್‌ಬಿಐ ನ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ನವದೆಹಲಿಯಲ್ಲಿ ನಡೆದ ಎನ್‌ಬಿಎಫ್‌ಸಿ ವಿಚಾರ ಸಂಕಿರಣ ಉದ್ದೇಶಿಸಿ ಮಾತನಾಡಿದ ಅವರು, ಸಾಲ ನೀಡುವಿಕೆಯು ಗ್ರಾಹಕರ ನಿಜವಾದ ಅಗತ್ಯತೆಗಳು ಮತ್ತು ಮರುಪಾವತಿ ಸಾಮರ್ಥ್ಯವನ್ನು ಆಧರಿಸಿರಬೇಕು ಹಾಗೂ ಬಡ್ಡಿ ದರಗಳು ಸಮಂಜಸವಾಗಿರಬೇಕು ಎಂದರು. ಎನ್‌ಬಿಎಫ್‌ಸಿಗಳು ಆಡಳಿತ, ಅಪಾಯ ನಿರ್ವಹಣೆ ಮತ್ತು ಗ್ರಾಹಕ ರಕ್ಷಣೆಯನ್ನು ತಮ್ಮ ಮೂಲ ನಂಬಿಕೆಗಳು ಮತ್ತು ನೀತಿಶಾಸ್ತ್ರದ ಭಾಗವಾಗಿ ಸಂಯೋಜಿಸುವ ಅಗತ್ಯವನ್ನು ಇದೇ ವೇಳೆ ಸಚಿವೆ ನಿರ್ಮಲಾ ಸೀತಾರಾಮನ್ ಒತ್ತಿ ಹೇಳಿದರು.

ಧ್ವನಿ : ನಿರ್ಮಲಾ ಸೀತಾರಾಮನ್ (೨೩ ಸೆಕೆಂಡ್‌ಗಳು)

<><><><>

ಘಾನಾ, ಟ್ರಿನಿಡಾಡ್ ಮತ್ತು ಟೊಬಾಗೊ, ಅರ್ಜೆಂಟೀನಾ, ಬ್ರೆಜಿಲ್ ಮತ್ತು ನಮೀಬಿಯಾಗೆ ಐದು ರಾಷ್ಟ್ರಗಳ ಭೇಟಿಯ ನಂತರ ಪ್ರಧಾನಿ ನರೇಂದ್ರ ಮೋದಿ ಇಂದು ನವದೆಹಲಿಗೆ ಮರಳಿದ್ದಾರೆ. ಪ್ರಧಾನಿಯವರು ತಮ್ಮ ಭೇಟಿಯ ಸಮಯದಲ್ಲಿ ಭಾರತದೊಂದಿಗೆ ಸಂಬಂಧಗಳನ್ನು ಮತ್ತಷ್ಟು ಬಲಪಡಿಸುವ ಬಗ್ಗೆ ಚರ್ಚಿಸಲು ಈ ರಾಷ್ಟ್ರಗಳ ಮುಖ್ಯಸ್ಥರೊಂದಿಗೆ ಸಂವಾದ ನಡೆಸಿದರು. ಪ್ರಧಾನಿ ಮೋದಿ ಅವರು ರಿಯೊ ಡಿ ಜನೈರೊದಲ್ಲಿ ನಡೆದ ಬ್ರಿಕ್ಸ್ ಶೃಂಗಸಭೆಯಲ್ಲಿಯೂ ಭಾಗವಹಿಸಿದ್ದರು. ಈ ಭೇಟಿಗಳು ಜಾಗತಿಕ ದಕ್ಷಿಣದಾದ್ಯಂತ ಭಾರತದ ಬಾಂಧವ್ಯವನ್ನು ಬಲಪಡಿಸುವುದು ಹಾಗೂ ಬ್ರಿಕ್ಸ್, ಆಫ್ರಿಕನ್ ಯೂನಿಯನ್, ಇಕೋವಾಸ್ ಮತ್ತು ಕ್ಯಾರಿಕಾಮ್‌ನಂತಹ ಬಹುಪಕ್ಷೀಯ ವೇದಿಕೆಗಳಲ್ಲಿ ಭಾರತದ ತೊಡಗಿಸಿಕೊಳ್ಳುವಿಕೆಯನ್ನು ಗಾಢವಾಗಿಸುವ ಗುರಿಯನ್ನು ಹೊಂದಿದ್ದವು.

<><><><>

ಬೆಂಗಳೂರಿನ ಟೌನ್‌ಹಾಲ್‌ನಲ್ಲಿಂದು ಕರ್ನಾಟಕ ಅಂಚೆ ವೃತ್ತದ ಗ್ರಾಮೀಣ ಡಾಕ್ ಸೇವಕರ ಸಮ್ಮೇಳನಕ್ಕೆ ಕೇಂದ್ರ ಸಂವಹನ ಮತ್ತು ಈಶಾನ್ಯ ಪ್ರದೇಶಾಭಿವೃದ್ಧಿ ಸಚಿವ ಜ್ಯೋತಿರಾಧಿತ್ಯ ಸಿಂಧಿಯಾ ಚಾಲನೆ ನೀಡಿದರು. ಇದೇ ವೇಳೆ ನಡೆದ ಸಂವಾದದಲ್ಲಿ ರಾಜ್ಯಾದ್ಯಂತ ಕಾರ್ಯ ನಿರ್ವಹಿಸುತ್ತಿರುವ ೮೦೦ ಗ್ರಾಮೀಣ ಡಾಕ್ ಸೇವಕರೊಂದಿಗೆ ಸಚಿವರು ಸಂವಾದ ನಡೆಸಿದರು. ಅಲ್ಲದೇ, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ರಾಜ್ಯದ ೧೫ ಗ್ರಾಮೀಣ ಡಾಕ್ ಸೇವಕರನ್ನು ಅವರು ಸನ್ಮಾನಿಸಿದರು. ಅಂಚೆ ವಿತರಣೆಯಿಂದ ಬ್ಯಾಂಕಿಂಗ್ ಮತ್ತ ವಿಮೆಯವರೆಗೂ ಅಗತ್ಯ ಅಂಚೆ ಮತ್ತು ಹಣಕಾಸು ಸೇವೆಗಳನ್ನು ನಾಗರಿಕರ ಮನೆ ಬಾಗಿಲಿಗೆ ತಲುಪಿಸುವಲ್ಲಿ ಗ್ರಾಮೀಣ ಡಾಕ್ ಸೇವಕರ ಪ್ರಯತ್ನಗಳನ್ನು ಪ್ರಶಂಸಿಸಲು ಈ ಕಾರ್ಯಕ್ರಮವು ಒಂದು ವೇದಿಕೆಯಾಗಿದೆ. ಕಾರ್ಯಕ್ರಮದಲ್ಲಿ ಅಂಚೆ ಇಲಾಖೆ ಕಾರ್ಯದರ್ಶಿ ವಂದಿತಾ ಕೌಲ್, ಅಂಚೆ ಸೇವೆಗಳ ಮಂಡಳಿಯ ಸದಸ್ಯರಾದ ಮಂಜು ಕುಮಾರ್ ಉಪಸ್ಥಿತರಿದ್ದರು.

<><><><>

ಗುಜರಾತ್‌ನ ವಡೋದರಾ ಜಿಲ್ಲೆಯಲ್ಲಿ ನದಿಗೆ ಅಡ್ಡಲಾಗಿ ಸೇತುವೆ ಕುಸಿದು ಬಿದ್ದ ಘಟನೆಯಲ್ಲಿ ಸಾವನ್ನಪ್ಪಿದವರ ಸಂಖ್ಯೆ ೧೨ಕ್ಕೆ ಏರಿಕೆಯಾಗಿದ್ದು, ಇನ್ನೂ ಮೂರು ಮೃತದೇಹಗಳು ಪತ್ತೆಯಾಗಿವೆ. ಪದ್ರಾ ಪಟ್ಟಣದ ಬಳಿಯ ಗಂಭೀರಾ ಗ್ರಾಮದ ಬಳಿ ನಾಲ್ಕು ದಶಕಗಳಷ್ಟು ಹಳೆಯದಾದ ಸೇತುವೆಯ ಒಂದು ಭಾಗ ನಿನ್ನೆ ಕುಸಿದ ನಂತರ ಹಲವಾರು ವಾಹನಗಳು ಮಹಿಸಾಗರ್ ನದಿಗೆ ಬಿದ್ದಿವೆ. ಘಟನಾ

ಸ್ಥಳದಲ್ಲಿ ರಕ್ಷಣಾ ಕಾರ್ಯಾಚರಣೆ ಮುಂದುವರೆದಿದೆ. ಜಿಲ್ಲಾಡಳಿತವು ರಕ್ಷಣಾ ಕಾರ್ಯಾಚರಣೆಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಿದೆ.

ಇದೇ ವೇಳೆ, ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಘಟನೆಯ ಬಗ್ಗೆ ತನಿಖೆಗೆ ಆದೇಶಿಸಿದ್ದಾರೆ.

<><><>

ಕೇಂದ್ರ ಗೃಹ ಸಚಿವ ಅಮಿತ್ ಶಾ ಇಂದು ರಾಂಚಿಯಲ್ಲಿ ನಡೆಯಲಿರುವ ೨೭ನೇ ಪೂರ್ವ ವಲಯ ಮಂಡಳಿ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ಸಭೆಯಲ್ಲಿ ನಾಲ್ಕು ಪೂರ್ವ ರಾಜ್ಯಗಳಾದ ಜಾರ್ಖಂಡ್, ಬಿಹಾರ, ಒಡಿಶಾ ಮತ್ತು ಪಶ್ಚಿಮ ಬಂಗಾಳದ ೭೦ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಮುಖ್ಯಮಂತ್ರಿ ಮೋಹನಚರಣ್ ಮಾಂಝಿ, ಉಪಮುಖ್ಯಮಂತ್ರಿ ಪಾರ್ವತಿ ಪರಿದಾ, ಸಚಿವ ಮುಖೇಶ್ ಮಹಾಲಿಂಗಂ ಒಡಿಶಾವನ್ನು ಪ್ರತಿನಿಧಿಸಲಿದ್ದಾರೆ. ಉಪಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಬಿಹಾರವನ್ನು ಪ್ರತಿನಿಧಿಸಲಿದ್ದಾರೆ ಮತ್ತು ಪಶ್ಚಿಮ ಬಂಗಾಳವನ್ನು ಸಚಿವೆ ಚಂದ್ರಿಕಾ ಭಟ್ಟಾಚಾರ್ಯ ಪ್ರತಿನಿಧಿಸಲಿದ್ದಾರೆ. ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೋರೆನ್, ಮುಖ್ಯ ಕಾರ್ಯದರ್ಶಿ, ಗೃಹ ಕಾರ್ಯದರ್ಶಿ, ಡಿಜಿಪಿ ಮತ್ತು ಇತರೆ ಅಧಿಕಾರಿಗಳು ಜಾರ್ಖಂಡ್ ಅನ್ನು ಪ್ರತಿನಿಧಿಸಲಿದ್ದಾರೆ.

<><><>

ದೆಹಲಿ-ಎನ್‌ಸಿಆರ್‌ನಲ್ಲಿ ಇಂದು ಬೆಳಗ್ಗೆ ರಿಕ್ಟರ್ ಮಾಪಕದಲ್ಲಿ ೪.೪ ತೀವ್ರತೆಯ ಭೂಕಂಪನ ಸಂಭವಿಸಿದೆ. ರಾಷ್ಟ್ರೀಯ ಭೂಕಂಪಶಾಸ್ತ್ರ ಕೇಂದ್ರದ ಪ್ರಕಾರ, ಭೂಕಂಪದ ಕೇಂದ್ರಬಿಂದು ಹರಿಯಾಣದ ಜಜ್ಜರ್‌ನಲ್ಲಿತ್ತು.

<><><>

ಏಳು ಸಾವಿರದ ೩೦೭ ಯಾತ್ರಿಕರ ಮತ್ತೊಂದು ತಂಡವು ಜಮ್ಮುವಿನ ಭಗವತಿ ನಗರ ಯಾತ್ರಿ ನಿವಾಸದ ಮೂಲ ಶಿಬಿರದಿಂದ ಪವಿತ್ರ ಅಮರನಾಥ ಗುಹೆ ದೇಗುಲಕ್ಕೆ ತೀರ್ಥಯಾತ್ರೆ ಆರಂಭಿಸಿದೆ. ಈ ತಂಡದಲ್ಲಿ ೫ ಸಾವಿರದ ೫೩೪ ಪುರುಷರು, ೧ ಸಾವಿರದ ೫೮೯ ಮಹಿಳೆಯರು, ೨೫ ಮಕ್ಕಳು, ೧೩೮ ಸಾಧುಗಳು ಮತ್ತು ೨೪ ಸಾಧ್ವಿಗಳು ಸೇರಿದ್ದಾರೆ. ೩ ಸಾವಿರದ ೮೧ ಯಾತ್ರಿಕರು ಇಂದು ಬೆಳಗಿನ ಜಾವ ಬಾಲ್ಟಾಲ್ ಮೂಲ ಶಿಬಿರಕ್ಕೆ ಮತ್ತು ೪ ಸಾವಿರದ ೨೨೬ ಯಾತ್ರಿಕರು ಪಹಲ್ಗಾಮ್

ಮೂಲ ಶಿಬಿರಕ್ಕೆ ತೆರಳಿದರು. ಅಲ್ಲಿಂದ ಅವರು ಪವಿತ್ರ ಅಮರನಾಥ ಗುಹೆಗೆ ತಮ್ಮ ಮುಂದಿನ ಪ್ರಯಾಣವನ್ನು ಮುಂದುವರಿಸಲಿದ್ದಾರೆ.

<><><><>

ಜಾರಿ ನಿರ್ದೇಶನಾಲಯವು ಬಾಗೇಪಲ್ಲಿ ಕಾಂಗ್ರೆಸ್ ಶಾಸಕ ಎಸ್.ಎನ್.ಸುಬ್ಬಾ ರೆಡ್ಡಿ ಮತ್ತು ಅವರ ಕುಟುಂಬ ಸದಸ್ಯರಿಗೆ ಸೇರಿದ ಬೆಂಗಳೂರಿನ ಐದು ಸ್ಥಳಗಳಲ್ಲಿ ಶೋಧ ನಡೆಸುತ್ತಿದೆ. ಅವರ ನಿವಾಸಗಳು, ಕಚೇರಿಗಳು ಹಾಗೂ ಅವರ ಪ್ರಮುಖ ಒಡನಾಡಿಗಳ ಸ್ಥಳಗಳ ಮೇಲೆ ಈ ಶೋಧ ಕಾರ್ಯ ನಡೆದಿದೆ.  ವಿದೇಶಿ ಖಾತೆಗಳಲ್ಲಿನ ಬ್ಯಾಂಕ್ ಬ್ಯಾಲೆನ್ಸ್, ವಾಹನಗಳಲ್ಲಿ ಹೂಡಿಕೆ ಹಾಗೂ ಮಲೇಷ್ಯಾ, ಹಾಂಗ್ ಕಾಂಗ್, ಜರ್ಮನಿ ಸೇರಿದಂತೆ ವಿದೇಶಗಳಲ್ಲಿನ ಸ್ಥಿರ ಆಸ್ತಿಗಳು ಸೇರಿದಂತೆ ಬಹಿರಂಗಪಡಿಸದ ವಿದೇಶಿ ಆಸ್ತಿಗಳಿಗೆ ಸಂಬಂಧಿಸಿದ ಆರೋಪಗಳು ಶಾಸಕ ಎಸ್.ಎನ್.ಸುಬ್ಬಾ ರೆಡ್ಡಿ ಅವರ ಮೇಲಿದೆ.

<><><><>

ಅಮೆರಿಕದ ಟೆಕ್ಸಾಸ್‌ನಲ್ಲಿ ಪ್ರವಾಹದಿಂದ ಸಾವನ್ನಪ್ಪಿದವರ ಸಂಖ್ಯೆ ಕನಿಷ್ಠ ೧೨೦ಕ್ಕೆ ಏರಿಕೆಯಾಗಿದೆ. ಕೆರ್ ಕೌಂಟಿಯೊಂದರಲ್ಲೇ, ಕನಿಷ್ಠ ೧೬೦ ಜನರು ನಾಪತ್ತೆಯಾಗಿದ್ದಾರೆ. ಟೆಕ್ಸಾಸ್‌ನಲ್ಲಿ ನಡೆಯುತ್ತಿರುವ ರಕ್ಷಣಾ ಕಾರ್ಯಾಚರಣೆಗಳಲ್ಲಿ ಸಹಾಯ ಮಾಡಲು ನಾಸಾ, ಎರಡು ವಿಮಾನಗಳನ್ನು ನಿಯೋಜಿಸಿದೆ.  ಏತನ್ಮಧ್ಯೆ, ನ್ಯೂ ಮೆಕ್ಸಿಕೋ ರಾಜ್ಯದಲ್ಲಿ ಭಾರೀ ಮಳೆಯಿಂದಾಗಿ ಹಠಾತ್ ಪ್ರವಾಹ ಉಂಟಾಗಿ ಕನಿಷ್ಠ ಮೂವರು ಸಾವನ್ನಪ್ಪಿದ್ದಾರೆ.

<><><><>

ಟೆಸ್ಟ್ ಕ್ರಿಕೆಟ್‌ನಲ್ಲಿ, ಭಾರತ ಮತ್ತು ಆತಿಥೇಯ ಇಂಗ್ಲೆಂಡ್ ತಂಡಗಳು, ಇಂದು ಮಧ್ಯಾಹ್ನ ಲಾರ್ಡ್ಸ್‌ನಲ್ಲಿ ಐದು ಪಂದ್ಯಗಳ ಆಂಡರ್ಸನ್-ತೆಂಡೂಲ್ಕರ್ ಟ್ರೋಫಿ ಸರಣಿಯ ಮೂರನೇ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಭಾರತೀಯ ಕಾಲಮಾನ ಮಧ್ಯಾಹ್ನ ೩.೩೦ಕ್ಕೆ ಪಂದ್ಯ ಆರಂಭವಾಗಲಿದೆ. ಬರ್ಮಿಂಗ್‌ಹ್ಯಾಮ್ ಟೆಸ್ಟ್‌ನಲ್ಲಿ ವಿಶ್ರಾಂತಿ ಪಡೆದ ಜಸ್ಪ್ರೀತ್ ಬುಮ್ರಾ, ಈ ಟೆಸ್ಟ್‌ಗೆ ಮರಳಲು ಸಜ್ಜಾಗಿರುವುದರಿಂದ, ಭಾರತದ ಬೌಲಿಂಗ್ ವಿಭಾಗವು ಗಮನಾರ್ಹವಾಗಿ ಬಲಗೊಂಡಂತೆ ಕಾಣುತ್ತಿದೆ. ಏತನ್ಮಧ್ಯೆ, ಆಡುವ ೧೧ ಆಟಗಾರರ ತಂಡವನ್ನು ಇಂಗ್ಲೆಂಡ್ ಘೋಷಿಸಿದ್ದು, ವೇಗದ ಬೌಲರ್ ಜೋಫ್ರಾ ಆರ್ಚರ್, ೪ ವರ್ಷಗಳ ನಂತರ ಟೆಸ್ಟ್ ತಂಡಕ್ಕೆ ಮರಳಿದ್ದಾರೆ.

<><><>

ಸ್ಪೇನ್‌ನ ಮ್ಯಾಡ್ರಿಡ್‌ನಲ್ಲಿ ನಡೆದ ಆರ್ಚರಿ ವಿಶ್ವಕಪ್ ಹಂತ ೪ ರ ಮಹಿಳಾ ಕಾಂಪೌಂಡ್ ವಿಭಾಗದಲ್ಲಿ, ಭಾರತ ಕನಿಷ್ಠ ಒಂದು ಪದಕವನ್ನು ಖಚಿತಪಡಿಸಿಕೊಂಡಿದೆ. ಸೆಮಿಫೈನಲ್‌ನಲ್ಲಿ ಜ್ಯೋತಿ ಸುರೇಖಾ ವೆನ್ನಮ್, ಪ್ರೀತಿಕಾ ಪ್ರದೀಪ್ ಮತ್ತು ಪರ್ನೀತ್ ಕೌರ್ ಅವರನ್ನೊಳಗೊಂಡ ಭಾರತೀಯ ತಂಡ, ಇಂಡೋನೇಷ್ಯಾವನ್ನು ೨೩೦-೨೨೮ ಅಂತರದಿಂದ ಸೋಲಿಸಿತು. ಇದಕ್ಕೂ ಮೊದಲು, ಭಾರತೀಯ ತಂಡವು ಕ್ವಾರ್ಟರ್ ಫೈನಲ್‌ನಲ್ಲಿ ಎಲ್‌ಸಾಲ್ವಡಾರ್ ತಂಡವನ್ನು ೨೩೫-೨೨೮ ಅಂತರದಿಂದ ಸೋಲಿಸಿತು. ಭಾರತವು ಶ್ರೇಯಾಂಕದ ಸುತ್ತಿನಲ್ಲಿ ೨ ಸಾವಿರದ ೧೧೮ ಅಂಕಗಳನ್ನು ಗಳಿಸಿ, ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದು ಮೊದಲ ಸುತ್ತಿನ ಎಲಿಮಿನೇಷನ್‌ನಲ್ಲಿ ಬೈ ಗಳಿಸಿತು. ಈ ತಿಂಗಳ ೧೨ ರಂದು ನಡೆಯುವ ಫೈನಲ್‌ನಲ್ಲಿ ತಂಡವು ಚೈನೀಸ್ ತೈಪೆಯನ್ನು ಎದುರಿಸಲಿದೆ. ಏತನ್ಮಧ್ಯೆ, ಭಾರತೀಯ ಪುರುಷರ ಕಾಂಪೌಂಡ್ ತಂಡವು ಕ್ವಾರ್ಟರ್ ಫೈನಲ್‌ನಲ್ಲಿ ಫ್ರಾನ್ಸ್ ವಿರುದ್ಧ ಒಂದೇ ಒಂದು ಅಂಕದಿಂದ ಸೋತಿತು. ಮಹಿಳಾ ರಿಕರ್ವ್ ತಂಡದ ಮುಖಾಮುಖಿಯಲ್ಲಿ, ಭಾರತದ ಅಂಕಿತಾ ಭಕತ್, ಗಾಥಾ ಆನಂದರಾವ್ ಖಡಕೆ ಮತ್ತು ದೀಪಿಕಾ ಕುಮಾರಿ ಇಂದು ಎರಡನೇ ಸುತ್ತಿನಲ್ಲಿ ಫ್ರಾನ್ಸ್ ವಿರುದ್ಧ ಸೆಣಸಲಿದ್ದಾರೆ. ಮತ್ತೊಂದೆಡೆ, ಪುರುಷರ ರಿಕರ್ವ್ ತಂಡದ ಸ್ಪರ್ಧೆಯ ಮೊದಲ ಸುತ್ತಿನಲ್ಲಿ ಭಾರತ, ಪೋಲೆಂಡ್ ತಂಡವನ್ನು ಎದುರಿಸಲಿದೆ.

<><><>

ಲಂಡನ್‌ನ ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ನಡೆಯುತ್ತಿರುವ ವಿಂಬಲ್ಡನ್ ಟೆನಿಸ್ ಪಂದ್ಯಾವಳಿಯಲ್ಲಿ, ಅಗ್ರಮಾನ್ಯ ಆಟಗಾರ ಜನ್ನಿಕ್ ಸಿನ್ನರ್ ಮತ್ತು ಮಾಜಿ ನಂಬರ್ ಒನ್ ಆಟಗಾರ ನೋವಾಕ್ ಜಾಕೋವಿಚ್, ಸೆಮಿಫೈನಲ್ ಪ್ರವೇಶಿಸಿದ್ದಾರೆ.

<><><>

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಎಂಟು ರಾಷ್ಟ್ರಗಳಾದ ಬ್ರೆಜಿಲ್, ಶ್ರೀಲಂಕಾ, ಅಲ್ಜೀರಿಯಾ, ಇರಾಕ್, ಲಿಬಿಯಾ, ಫಿಲಿಪೈನ್ಸ್, ಮೊಲ್ಡೊವಾ ಮತ್ತು ಬ್ರೂನಿಗಳಿಂದ ಆಮದು ಮಾಡಿಕೊಳ್ಳುವ ವಸ್ತುಗಳ ಮೇಲೆ ಹೊಸದಾಗಿ ಸುಂಕಗಳನ್ನು ಘೋಷಿಸಿದ್ದಾರೆ. ಈ ಸುಂಕಗಳು ಆಗಸ್ಟ್ ೧ ರಿಂದ ಜಾರಿಗೆ ಬರಲಿವೆ. ಬ್ರೆಜಿಲ್, ಮೇಲೆ ಅತ್ಯಧಿಕ ಶೇಕಡ ೫೦ ರಷ್ಟು ಸುಂಕವನ್ನು ಅಮೆರಿಕ ವಿಧಿಸಲಿದೆ. ಶ್ರೀಲಂಕಾ, ಇರಾಕ್, ಅಲ್ಜೀರಿಯಾ ಮತ್ತು ಲಿಬಿಯಾದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಅಮೆರಿಕ ಶೇಕಡ ೩೦ ರಷ್ಟು ಸುಂಕವನ್ನು ವಿಧಿಸಲಿದೆ.

ಮೊಲ್ಡೊವಾ ಮತ್ತು ಬ್ರೂನಿ ಶೇಕಡ ೨೫ ರಷ್ಟು ಸುಂಕವನ್ನು ಎದುರಿಸಬೇಕಾಗುತ್ತದೆ. ಫಿಲಿಪ್ಪೈನ್ಸ್ ಶೇಕಡ ೨೦ ರಷ್ಟು ಸುಂಕವನ್ನು ಅಮೆರಿಕ ವಿಧಿಸಲಿದೆ. ಅಮೆರಿಕನ್ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವ ಮೇಲಿನ ಸುಂಕವನ್ನು ಹೆಚ್ಚಿಸಲು ನಿರ್ಧರಿಸಿದರೆ, ಅದೇ ಪ್ರಮಾಣದಲ್ಲಿ ಸುಂಕ ದರವನ್ನು ಹೆಚ್ಚಿಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದಾರೆ. ಆದಾಗ್ಯೂ, ಈ ದೇಶಗಳು ತಮ್ಮ ವ್ಯಾಪಾರ ನೀತಿಗಳನ್ನು ಪರಿಷ್ಕರಿಸಿದರೆ, ಈ ಸುಂಕಗಳನ್ನು ಕಡಿಮೆ ಮಾಡುವ ಇಚ್ಛೆಯನ್ನು ಅಮೆರಿಕ ಅಧ್ಯಕ್ಷರು ವ್ಯಕ್ತಪಡಿಸಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>